**<u>ದಿನಾಂಕಃ 02-04-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಮ್ ಎ ಕೆ ವಕೀಲರಿಂದಃ</u>**

ನನ್ನ ಮತ್ತು ಎದುರುದಾರರ ಮದುವೆ ಭದ್ರಾವತಿಯಲ್ಲಿ ಆಗಿದೆ ಎಂದರೆ ನಿಜ. ನಮ್ಮ ಮದುವೆಯ ಖರ್ಚು ವೆಚ್ಚಗಳನ್ನು ನನ್ನ ಗಂಡನ ಕಡೆಯವರೇ ಮಾಡಿದ್ದಾರೆ ಎಂದರೆ ನನ್ನ ತಂದೆಯವರು ಕೊಟ್ಟಿದ್ದಾರೆ. ಮದುವೆರಯಾದ ನಂತರ ನಾನು ನನ್ನ ಗಂಡನ ಜೊತೆ ವಾಸವಾಗಿದ್ದೇನು ಎಂದರೆ ಸರಿ. ನನ್ನ ಗಂಡನ ಜೊತೆ ಅತ್ತೆ, ನಾದಿನಿ, ವಾಸವಾಗಿದ್ದರು ಎಂದರೆ ನಿಜ. ನಾನು ಆಗಾಗ ನನ್ನ ಗಂಡನ ಜೊತೆ ಜಗಳ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಅತ್ತೆ ಜಗಳ ಬಿಡಿಸಲು ಬಂದಾಗ ನಾನು ತಕರಾರು ಮಾಡಿ ಬೇರೆ ಮನೆ ಮಾಡಬೇಕು ಎಂದು ನನ್ನ ಗಂಡನಿಗೆ ಹೇಳುತ್ತಿದ್ದೇನು ಎಂದರೆ ಸರಿಯಲ್ಲ. ನನ್ನ ಗಂಡ ಬೇರೆ ಮನೆ ಮಾಡಲಿಲ್ಲದ ಕಾರಣ ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡ ಭದ್ರಾವತಿ ನ್ಯಾಯಾಲಯದಲ್ಲಿ ದಾಂಪತ್ಯ ಪುನರ್ ಸ್ಥಾಪನೆಗಾಗಿ ಕೇಸು ಹಾಕಿದ್ದರು ಎಂದರೆ ನಿಜ.

2. ಆ ಕೇಸಿನಲ್ಲಿ ನಾವಿಬ್ಬರೂ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ನಿಜ. ನನ್ನ ಕೋರಿಕೆಯಂತೆ ಭದ್ರಾವತಿಯಲ್ಲಿ ಒಂದು ಬಾಡಿಗೆ ಮನೆಯನ್ನು ಮಾಡಿದ್ದರು ಎಂದರೆ ನಿಜ. ನನ್ನ ಗಂಡ ಸಾಲ ತಿರುವಳಿ ಮಾಡುವ ಕಾರಣಕ್ಕಾಗಿ ನಾನು ಹಾಕಿರುವ ಆರ್ ಟಿ ಸಿ ಗಳಲ್ಲಿ ಇರುವ ಜಮೀನನ್ನು ಮಾರಾಟ ಮಾಡಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಆರ್ ಟಿ ಸಿ ಗಳಲ್ಲಿ ದಿನಾಂಕ 10-09-2020 ರಲ್ಲಿ ಟಿ ಸಿ ವಿನಯ್ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಹಳೇ ಆರ್ ಟಿ ಸಿ ಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಮನೆ ಯಾರ ಹೆಸರಿನಲ್ಲಿದೆ ಎಂದರೆ ನನ್ನ ಅತ್ತೆಯ ಹೆಸರಿನಲ್ಲಿದೆ. ಎರಡು ಪ್ಲೋರ್ ಮಿಲ್ ಗಳು ಯಾರ ಹೆಸರಿನಲ್ಲಿವೆ ಎಂದರೆ ನನ್ನ ಅತ್ತೆಯ ಹೆಸರಿನಲ್ಲಿದೆ. ಸೈಟು ತೋಟ ನನ್ನ ಗಂಡನ ಹೆಸರಿನಲ್ಲಿದೆ. ಅಡಿಗೆ ತೋಟ ನನ್ನ ಗಂಡನ ಹೆಸರಿನಲ್ಲಿದೆ ಎಂದು ತೋರಿಸಲು ಹೊಸ ಆರ್ ಟಿ ಸಿ ಯನ್ನು ಹಾಜರುಪಡಿಸಿದ್ದೀರಾ ಎಂದರೆ ಇಲ್ಲ.

3. ನನ್ನ ಗಂಡನ ಹೆಸರಿನಲ್ಲಿ ಯಾವುದೇ ಅಡಿಕೆ ತೋಟ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಆಸ್ತಿಗಳು ನನ್ನ ಗಂಡನ ಹೆಸರಿನಲ್ಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ 42 ಲಕ್ಷ ರೂ. ಆಧಾಯ ಇರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಜೊತೆ

ಜೀವನ ಮಾಡಲು ಇಷ್ಟವಿಲ್ಲದ ಕಾರಣ ನಾನೇ ಬಿಟ್ಟು ಬಂದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ಗಂಡನ ಮನೆಯಲ್ಲಿ ಯಾವ ದಿನಾಂಕದಂದು ಬಿಟ್ಟು ಬಂದಿರುತ್ತೇನೆ ಎಂದು ತಿಳಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಆಸ್ತಿಯನ್ನು ಮಾರಾಟ ಮಾಡಿಕೊಂಡು ತಿಂಗಳಿಗೆ 5-6 ಸಾವಿರಕ್ಕೆ ಕೂಲಿ ಕೆಲಸ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ದಾಖಲು ಮಾಡಿರುವ ಎಮ್ ಸಿ ನಂ.64/2023 ಭದ್ರಾವತಿ ನ್ಯಾಯಾಲಯದಲ್ಲಿ ದಾಖಲು ಮಾಡಿರುವ ಪ್ರಕಾರ ಈಗಲೂ ಚಾಲ್ತಿಯಲ್ಲಿದೆ ಎಂದರೆ ಸಾಕ್ಷಿಯೂ ಮೊದಲು ಅದೇ ರೀತಿ ಪ್ರಕರಣ ದಾಖಲು ಮಾಡಿ ನನ್ನ ಗಂಡನ ಜೊತೆ ಜೀವನ ಮಾಡುತ್ತಿದ್ದು ಪುನಃ ನನಗೆ ಹೊಡೆದು ಬಡಿದು ಮನೆಯಿಂದ ಹೊರಗೆ ಹಾಕಿದ್ದಾರೆ. ನಂತರ ಇನ್ನೊಂದು ಪ್ರಕರಣ ದಾಖಲು ಮಾಡಿದ್ದಾರೆ. ನನ್ನ ಗಂಡ ಕುಡಿಯುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ಗಂಡ ನನ್ನ ಮಗನನ್ನು ಭದ್ರಾವತಿಯಲ್ಲಿ ಸೆಂಟ್ ಜೋಸೆಫ್ ಶಾಲೆಯಲ್ಲಿ ಸೇರಿಸಿದ್ದರು ಎಂದರೆ ಸರಿ. ನನ್ನ ಗಂಡನ ಇಚ್ಛೆಗೆ ವಿರುದ್ದವಾಗಿ ನನ್ನ ಗಂಡನನ್ನು ಬಿಟ್ಟು ಬಂದಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಗಂಡನ ಮನೆ ಬಿಟ್ಟು ಬಂದ ನಂತರ ಆತನ ವಿರುದ್ದ ಯಾವುದೇ ಕ್ರಿಮಿನಲ್ ಕೇಸುಗಳನ್ನು ಹಾಕಿಲ್ಲ ಎಂದರೆ ನನಗೆ ಕೇಸು ಹಾಕಲು ಶಕ್ತಿ ಇಲ್ಲ. ನನ್ನ ತಂದೆಗೆ ಸಾಕಷ್ಟು ಆಧಾಯ ಇರುವ ಕಾರಣ ನನ್ನ ತಂದೆಯ ಮನೆಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ಹೀಗಾಗಿ ನಾನು ನನ್ನ ಗಂಡನ ಮನೆಗೆ ಬರಲು ಇಷ್ಟಪಡುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಈಗಲೂ ಸಹ ನನ್ನನ್ನು ಕರೆದುಕೊಂಡು ಹೋಗಿ ಜೀವನ ಮಾಡಲು ಸಿದ್ದರಿದ್ದಾರೆ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಸುಳ್ಳು ಆರೋಪ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-
(ಬಿ.ಸಿದ್ದರಾಜು)
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.